ಆ) ಸದರಿ ರಸ್ತೆಯನ್ನು ಎಷ್ಟು ದಿನಗಳಲ್ಲಿ ಪೂರ್ತಿಗೊಳಿಸಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹುಬ್ಬಳ್ಳಿ--ಧಾರವಾಡ (ರಾಷ್ಟ್ರೀಯ ಹೆದ್ದಾರಿ ನಂ.4) ಬೈಪಾಸ್ ರಸ್ತೆ ನಿರ್ಮಾಣದ ಪ್ರಥಮ ಹಂತದ 17.425ಕಿ.ಮೀ. ಉದ್ದದ ರಸ್ತೆಯ ಸಿ.ಡಿ. ಕೆಲಸವನ್ನು 1987ರಲ್ಲೂ ಹಾಗೂ ಬಲ್ಲಿ ಡಾಂಬರ್ ಕೆಲಸವನ್ನು 1990ರಲ್ಲೂ ಪ್ರಾರಂಭಿಸಲಾಗಿದೆ. ಈ 17.425 ಕಿ.ಮೀ. ರಸ್ತೆಯ ಸಿ.ಡಿ. ಕೆಲಸವು ಮುಗಿದಿದೆ: ಈ ಕಾಮಗಾರಿಗೆ ಈವರೆಗೆ ಸುಮಾರು 350 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ಆ) ಪ್ರಥಮ ಹಂತದ 17.425ಕಿ.ಮೀ. ದೂರದ ಬೈಪಾಸ್ ರಸ್ತೆ ಕೆಲಸವನ್ನು ಡಿಸೆಂಬರ್ 1993ರ ಬೇಳೆಗೆ ಮುಗಿಸುವ ಸಂಭವ ಇದೆ.

ಕೃಷ್ಣ-ಕಾವೇರಿ ಯೋಜನೆಗೆ ಖರ್ಚಾದ ಹಣ

442 (1307): ಶ್ರೀ ಬಾಬುಳ್ ನಾಗರಾಜ್ (ಚಾಮರಾಜನಗರ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಕಾವೇರಿ ಯೋಜನೆಗಳಿಗೆ ಇದುವರೆಗೆ ಮಾಡಿರುವ ಖರ್ಚೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) 1992ರ ಡಿಸೆಂಬರ್ ಅಂತ್ಯದವರೆಗೆ ಮಾಡಿರುವ ಖರ್ಚು

(ಕೋಟಿ ರೂ.ಗಳಲ್ಲಿ)

1. ಕೃಷ್ಣಾ ಯೋಜನೆಗಳು	1987.55
2. ಕಾವೇರಿ ಯೋಜನೆಗಳು	1243.23

ಬೆಂಗಳೂರಿನಿಂದ -- ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿ.

447 (1278): ಶ್ರೀ ಡಿ.ಕೆ. ಶಿವಕುಮಾರ (ಸಾತನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಿಂದ ಕನಕಪುರ - ಮಳವಳ್ಳಿ, ಮೈಸೂರು ಮುಖಾಂತರ ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿಯನ್ನು ಸ್ಥಾಪಿಸಲು ಸರ್ಕಾರದ ಯೋಜನೆಯಲ್ಲಿದೆಯೇ,

ಆ) ಹಾಗಿದ್ದಲ್ಲಿ, ಈ ಹೆದ್ದಾರಿ ಸ್ಥಾಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಇದೆ.

ಆ) ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಬಗ್ಗೆ ಶೀಘ್ರ ನಿರ್ಧಿಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರೈಸಲು ತಗಲುವ ವೆಚ್ಚ

448 (1328): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ):-